ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.

**ಸಿ.ಸಿ. ಸಂಖ್ಯೆ.258/2024**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಕಡೂರು ಪೊಲೀಸರು

-ವಿರುದ್ಧ-

ಆರೋಪಿತರು ಃ ಸೋಮಶೇಖರ ಮತ್ತು ಇನ್ನೊಬ್ಬರು

ದೋಷಾರೋಪಣೆ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹಾಗೂ ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹಾಗೂ ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಸೋಮಶೇಖರ ಬಿನ್ ಚಿನ್ನಸ್ವಾಮಿ, ಸುಮಾರು 37 ವರ್ಷ, ವ್ಯವಸಾಯ, ವಾಸ ಃ ಕೊರಚರಹಟ್ಟಿ ಗ್ರಾಮ, ಎಮ್ಮೆದೊಡ್ಡಿ ಅಂಚೆ, ಕಡೂರು ತಾಲ್ಲೂಕು.

2. ಸತೀಶ ಬಿನ್ ವೆಂಕಟೇಶಬೋವಿ, 35 ವರ್ಷ, ವ್ಯವಸಾಯ, ವಾಸ ಃ ಬುಕ್ಕಸಾಗರ ಗ್ರಾಮ, ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಮಾಡುವುದೇನೆಂದರೆಃ

ಕಡೂರು ಪೊಲೀಸ್ ಠಾಣಾ ಸರಹದ್ದಿನ ಶಕುನಿಪುರ ಗ್ರಾಮದ ಸರ್ವೇ ನಂಬರ್ 3 ಮತ್ತು 4 ರಲ್ಲಿ ಚಾಸಾ-1 ಮಹೇಂದ್ರಪ್ಪರವರ ಹೆಸರಿನಲ್ಲಿ ಒಟ್ಟು 8 ಎಕರೆ ಜಮೀನಿದ್ದು, ಸದರಿ ಜಮೀನಿನ ಪಕ್ಕದಲ್ಲಿ ಎಮ್ಮೆದೊಡ್ಡಿ ಗ್ರಾಮದ ಸರ್ವೇ ನಂಬರ್ 70/* ರಲ್ಲಿ ಬಗರ್ ಹುಕುಂ ಜಾಗವಿದ್ದು, ಇದನ್ನು ಚಾಸಾ-1 ಹಾಗೂ ಅವರ ಸಂಬಂಧಿಕರು ಸುಮಾರು 20-25 ವರ್ಷಗಳಿಂದ ತಂತಿಬೇಲಿಯನ್ನು ಹಾಕಿಕೊಂಡು ಸಾಗುವಳಿಕೆ ಅರ್ಜಿಯನ್ನು ಹಾಕಿಕೊಂಡು ಸ್ವಾಧೀನದಲ್ಲಿರುತ್ತಾರೆ. ಅಂತೆಯೇ 1 ನೇ ಆರೋಪಿಯಾದ ನೀವು ಈ ಬಗರ್ ಹುಕುಂ ಜಮೀನು ತನಗೂ ಸೇರಬೇಕೆಂದು ತೊಂದರೆ ಕೊಡುತ್ತಾ ಬಂದಿರುತ್ತೀರಿ. ಈ ಹಿನ್ನೆಲೆಯಲ್ಲಿ ದಿನಾಂಕಃ 26.10.2022 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಚಾಸಾ-1 ರವರು ಜಮೀನಿನಲ್ಲಿರುವಾಗ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 447 ರ ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಜಮೀನಿನಲ್ಲಿರುವ ಸುಮಾರು 8-10 ಕಂಬಗಳನ್ನು ಕಲ್ಲಿನಿಂದ ಹೊಡೆದು ತುಂಡು ಮಾಡಿ ನಷ್ಟ ಉಂಟು ಮಾಡಿದ ಬಗ್ಗೆ ಚಾಸಾ-1 ರವರು ಯಾಕೆ ಕಲ್ಲುಕಂಬಗಳನ್ನು ಮುರಿದು ಹಾಕುತ್ತೀಯಾ ಎಂದು ಆರೋಪಿತರಾದ ನಿಮ್ಮನ್ನು ಪ್ರಶ್ನೆ ಮಾಡಿದ್ದಕ್ಕೆ , 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಬೋಳಿಮಗನೇ, ಸೂಳೇ ಮಗನೇ ಈ ಜಮೀನು ನನಗೆ ಸೇರಬೇಕಾಗಿದ್ದು ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ

ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ರ ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಜಮೀನಿನಲ್ಲಿರುವ ಸುಮಾರು 8-10 ಕಂಬಗಳನ್ನು ಕಲ್ಲಿನಿಂದ ಹೊಡೆದು ತುಂಡು ಮಾಡಿ ಸುಮಾರು 3 ಸಾವಿರ ರೂಪಾಯಿಗಳನ್ನು ಚಾಸಾ-1 ರವರಿಗೆ ನಷ್ಟ ಉಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 427 ರ ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೆಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರನ್ನು ಕೈಯ್ಯಿಂದ ನೂಕಿ ಸ್ವ ಇಚ್ಛೆಯಿಂದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ರ ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಜಮೀನಿನ ವಿಚಾರಕ್ಕೆ ಬಂದರೆ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಹಾಗೂ ನನ್ನ ತಂಟೆಗೆ ಬಂದರೆ ನಿಮ್ಮ ಮೇಲೆ ಅಟ್ರಾಸಿಟಿ ಕೇಸ್ ಹಾಕಿಸುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 506 ರ ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉತ್ತರಃ 1 ಮತ್ತು 2 ನೇ ಆರೋಪಿತರು ಃ- ತಿಳಿಯಿತು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ 1 ಮತ್ತು 2 ನೇ ಆರೋಪಿತರು ಃ- ಯಾವುದೇ ತಪ್ಪು ಮಾಡಿರುವುದಿಲ್ಲ.
ವಿಚಾರಣೆಯಾಗಬೇಕು.

ದಿನಾಂಕಃ 04 ನೇ ಮಾರ್ಚ್ ಮಾಹೆ 2025.

-ಸಹಿ-

**(ಸವಿತರಾಣಿ ಹೆಚ್.ವಿ.)**
**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಡೂರು.